Regd No M 1229 | 2nd Year | Sri 'Satyavadi' Mysore | 25—2—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಥೇದಾರ್ ಎಂ. ಏ ಸುಬ್ಬರಾಯುರು [ಬಿತಿ ಪ್ರತಿಪೆ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಕಾಂಗ್ರೆಸಿನ ಭವಿಷ್ಯದ ಬಗೆ ಪ್ರಧಾನಿ ಪಂ. ನೆಹರು ಎಚ್ಚರಿಕೆ

ವಿಶ್ವಾಸಮತ ಕೇಳುವ ಸಂಭವ

ನವದೆಹಲಿ 24 — ಒರಿಸ್ಸಾ ಪ್ರಧಾನಿ ಶ್ರೀ ಹರೇಕೃಷ್ಣ ಮೆಹತಾಬರು ಮುಂದಿನವಾರ ವಿಧಾನಸಭೆಯಲ್ಲಿ ವಿಶ್ವಾಸಮತ ಕೋರುವ ಸಂಭವವಿದೆ ಮಂತ್ರಿಮಂಡಲ ರಾಜೀನಾಮೆ ಕೊಡಬೇಕಾಗಿಲ್ಲವೆಂದು ಕಾಂಗ್ರೆಸು ಹೈಕಮ್ಯಾಂಡು ಸೂಚಿಸಿದೆ.

ಶೀಘ್ರ ಒಪ್ಪಂದ

ಮಾಸ್ಕೋ 24 — ರಷ್ಯ ಮತ್ತು ಫಿನ್‌ಲ್ಯಾಂಡ್ ಪರಸ್ಪರಗಳ ಸಮಸ್ಯೆಗಳನ್ನು ಸಮಾಧಾನಕರವಾಗಿ ಬಗೆಹರಿಸಿಕೊಳ್ಳಲು ಶೀಘ್ರದಲ್ಲಿ ಒಂದು ಒಪ್ಪಂದಕ್ಕೆ ಬರಬೇಕೆಂದು ರಷ್ಯದ ಪ್ರಧಾನಿ ಕ್ರುಶ್ಚೇವ್ ಸೂಚಿಸಿರುವರು.

— X —

ಬೆಳಗಾವಿ 24— ಇಲ್ಲಿಗೆ ಸುಮಾರು ೧೫ ಮೈಲಿ ದೂರದ ಕನವಾಸಿ ಎಂಬ ದೊಡ್ಡ ಹಳ್ಳಿಯಲ್ಲಿ ಇಂದು ಸಾಯಂಕಾಲ ಗಾಳಿಯಿಂದಲ್ಲಿ ಬೆಂಕಿ ಅವಘಡವೊಂದು ಸಂಭವಿಸಿ ಸುಮಾರು 13 ಮನೆಗಳು ಸುಟ್ಟು ಹೋದವು. ಸುಮಾರು ಹತ್ತು ಸಾವಿರ ರೂಪಾಯಿ ಬೆಲೆಬಾಳುವ ಆಸ್ತಿಪಾಸ್ತಿ ಬೆಂಕಿಗಾಹುತಿಯಾಯಿತು.

ನವದೆಹಲಿ 24 — ಕಾಂಗ್ರೆಸು ಪಾರ್ಲಿಮೆಂಟರಿ ಪಕ್ಷದ ರಹಸ್ಯ ಸಭೆಯಲ್ಲಿ ಪಂ|| ನೆಹರು ಭಾಷಣ ಮಾಡುತ್ತಾ, ನಾಗ್ಪುರ ಭೂ ಸುಧಾರಣೆ ನಿರ್ಣಯವನ್ನು ಜಾರಿ ಮಾಡುವದರಲ್ಲಿ ಕಾಂಗ್ರೆಸು ದೌರ್ಬಲ್ಯ ತೋರಿದರೆ ಕಾಂಗ್ರೆಸು ಪಕ್ಷ ಪ್ರಜಾಭಿಪ್ರಾಯದಿಂದ ದೂರವಾಗುವದು ಮತ್ತು ಪಟ್ಟಭದ್ರ ಹಿತದವರ ವತಕ್ಕೆ ಕಾಂಗ್ರೆಸು ಹೋಗುವದು ಎಂದರು.

ಅಧಿಕಾರಾವಧಿ ಮುಗಿದಿದೆ

ನವದೆಹಲಿ 24— ಪಶ್ಚಿಮ ಬಾಕಿ ಸ್ಥಾನದಿಂದ ಬಂದ ಸ್ಥಾನಪಲ್ಲಟರಾದ ಮಂತ್ರಿಗಳ ವಸತಿಗೆ ಸಂಬಂಧಪಟ್ಟ ಕೆಲಸದಲ್ಲಿ ಅಧಿಕಾರಾವಧಿ ಈಗಾಗಲೇ ಮುಗಿದಿದೆ. ಕೊನೆಯ ಘಟ್ಟದ ಕೆಲಸ ಅಂದರೆ ಸರಿಹಾರ ಪಾವತಿಯನ್ನು 59-60 ರ ಅವಧಿಯಲ್ಲಿ ಮುಕ್ತಾಯಗೊಳಿಸಲಾಗುವುದು ಅಮೇಲೆ ಈ ಮಂತ್ರಿಶಾಖೆ ಮುಕ್ತಾಯಗೊಳಿಸಲು ಸಾಧ್ಯವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಧಾನ್ಯ ಸಂಗ್ರಹ

ನವದೆಹಲಿ 24— ಮೂವ ರಾಜ್ಯಗಳಲ್ಲಿ ಕೊಳ್ಳುವ ಏಜೆಂಟರ ಮೂಲಕ ಧಾನ್ಯವನ್ನು ಸಂಗ್ರಹ ಮಾಡಲಾಗುತ್ತದೆಯೋ ಆ ಸಂಸ್ಥೆಗಳಲ್ಲೆಲ್ಲಾ ಸಹಕಾರಿ ಸಂಸ್ಥೆಗಳಿಗೆ ಅವು ಇದ್ದಲ್ಲಿ ಅಕ್ಕಿಯನ್ನು ಸಂಗ್ರಹಿಸುವ ಕೆಲಸವನ್ನು ವಹಿಸಿಕೊಡಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

26 — ತೃತೀಯ ಹಸ್ತ

ತೆರಿಗೆ ವಿಧಿಸುಲ್ಲ

ನವದೆಹಲಿ 24— 1958 ರ ಡಿಸೆಂಬರು ತಿಂಗಳಲ್ಲಿ ಕಟಕ್ಕಿನಲ್ಲಿ ಅಖಿಲ ಭಾರತ ವೈದ್ಯಕೀಯ ಕಾನ್ಫರೆನ್ಸಿನ ಸಭೆಯಲ್ಲಿ ಡಾ|| ಕಾಣಾಕರ್ಡ್‌ರವರು ತಮ್ಮ ಭಾಷಣದಲ್ಲಿ, ಜನಸಂಖ್ಯೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ಜನನ ಶೇರಿಗೆಯನ್ನು ವಿಧಿಸಬೇಕೆಂದು ಮಾಡಿದ ಸಲಹೆಯನ್ನು ಕಾರ್ಯಾಚರಣೆಗೆ ತರಲು ಸರ್ಕಾರದ ಉದ್ದೇಶವಿಲ್ಲವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ಪರ್ಯಾಲೋಚನೆಯಲ್ಲಿ.

ನವದೆಹಲಿ 24— ಪ್ರತಿ ಯೊಂದು ರೈಲ್ವೆಯ ದೊಡ್ಡದೊಡ್ಡ ನಿಲ್ದಾಣಗಳಲ್ಲಿ ಸರಿಯಾದ ಲಾಕರುಗಳನ್ನು ಒದಗಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದೂ ಈ ಲಾಕರುಗಳಲ್ಲಿ ಬೆಲೆಬಾಳುವ ಪದಾರ್ಥಗಳನ್ನು ಸೂಕ್ತವಾದ ಶುಲ್ಕವನ್ನು ಕೊಟ್ಟು ಇಟ್ಟುಕೊಳ್ಳಬಹುದೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು

ಕಾಂಗ್ರೆಸಿಗರಿಗೆ ಸೋಲು

ಉತ್ತರ ಪ್ರದೇಶದ ಶಾಸನಸಭೆಗೆ ಲಕ್ಷ್ಮಣ ಸಿಂಗ್ ಎಂಬ ಸ್ವತಂತ್ರರು ಮೂರು ನಾಯಿತರು ; ಅವರ ಪ್ರತಿಸ್ಪರ್ಧಿ ಕಾಂಗ್ರೆಸಿಗರು ಸೋತುಹೋದರು

ಉಪನಯನ ಮಹೋತ್ಸವ

ಮೈಸೂರು ಸರಸ್ವತೀಪುರಂನಲ್ಲಿರುವ ವಾಟರ್ ಸಪ್ಲೈ ಮತ್ತು ಸ್ಯಾನಿಟರಿ ಇಂಜನೀಯರಿಂಗ್ ಕಂಟ್ರಾಕ್ಟರರಾಗಿರುವ ಶ್ರೀಮಾನ್ ಎಸ್. ಗೋಪಾಲಶಾಸ್ತ್ರಿಗಳವರ ಪುತ್ರ ಚಿ|| ಎಸ್. ಜಿ. ಪ್ರಕಾಶರ ಉಪನಯನ ಮಹೋತ್ಸವವು ಈ ದಿನ ಬೆಳಿಗ್ಗೆ ವೈಭವವಾಗಿ ನೆರವೇರಿತು.

ನಿಯೋಗದ ಆಗಮನ

ನವದೆಹಲಿ 24— ರಷ್ಯಾದ ಸೌರ್ವೋಚ್ಚ ಸೋವಿಯಟ್ ಪ್ರೆಸಿಡಿಯಂನ ಸದಸ್ಯರಾದ ಶ್ರೀ ಆಂಡ್ರಿಯೇವಿಚ್ ಆಂಡ್ರಿಯೇವರ ನಾಯಕತ್ವದಲ್ಲಿ, ಭಾರತದಲ್ಲಿ 15 ದಿನಗಳ ಕಾಲ ಪ್ರವಾಸಕ್ಕಾಗಿ ಸೋವಿಯಟ್ ಸೌಹಾರ್ದ ನಿಯೋಗವೊಂದು ಇಂದು ದೆಹಲಿಗೆ ಆಗಮಿಸಿತು.

ಧರ್ಮ ಅನುಸರಿಸಿ

ಅಮರಾವತಿ— ತಾ || 23 ರಂದು ಘಾನಗಪುರಂ ದೇವಸ್ಥಾನದಲ್ಲಿ ಸಜ್ಜನಕ್ಕಡದ ಶ್ರೀದರ ಸ್ವಾಮಿಗಳು ಮಾಡಿದ ಭಾಷಣದಲ್ಲಿ ಜನರು ತಮ್ಮತಮ್ಮ ಮತ ಧರ್ಮ ಮತ್ತು ಸಂಸ್ಕೃತಿ ಅನುಸರಿಸಿ ನಡೆಯಬೇಕೆಂದು ಹೇಳಿದರು.

ಪತ್ರಿಕಾ ಪ್ರದರ್ಶನ

ಮೈಸೂರು 24 — ಮೈಸೂರಿನಲ್ಲಿ ಮಾರ್ಚಿ ಪ್ರಥಮ ವಾರದಲ್ಲಿ ಅಂತರರಾಷ್ಟ್ರೀಯ ವೃತ್ತಪತ್ರಿಕಾ ಪ್ರದರ್ಶನವನ್ನು ನಡೆಸಲು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದವರು ಏರ್ಪಡಿಸುತ್ತಿರುವರೆಂದು ತಿಳಿಯಬಂದಿದೆ.

ಬಂಧನ

ಭೂಪಾಲ್ 24— ಒಂದು ಜೈನ ಮಾಸಪತ್ರಿಕೆಯಲ್ಲಿ ರಾಮ – ಸೀತೆ ವಿಚಾರದಲ್ಲಿ ಪ್ರಕಟವಾದ ಲೇಖನ ಸಂಬಂಧದಲ್ಲಿ ಉಂಟಾದ ಗಲಾಟೆಯಲ್ಲಿ 120 ಜನರಿಗೆ ಮೇಲ್ಪಟ್ಟು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ಕಲ್ಕತ್ತಾ 24 — ಸೆಣಬು ಗಿರಣಿಗಳ ೬ ಸಾವಿರ ಕೆಲಸಗಾರರು ನಿರುದ್ಯೋಗಿಗಳಾಗುವ ಸಂಭವವಿದೆಯೆಂದು ವಿಧಾನ ಸಭೆಯಲ್ಲಿ ತಿಳಿಸಲಾಯಿತು

ವಿವಿಧ ವರ್ತಮಾನ

ಮಾಸ್ಕೊ 14— 100 ಜನ ಕುಳಿತುಕೊಳ್ಳಲು ಸ್ಥಳಾವಕಾಶವುಳ್ಳ ನೂತನ ಸೋವಿಯತ್ 'ತು 104 ಬಿ' ಜೆಟ್ ವಿಮಾನವು ತನ್ನ ಅಂತಿಮ ಸುದೂರ ಪರೀಕ್ಷಾ ಯಾನದಲ್ಲಿ ನಿಲುಗಡೆಯಿಲ್ಲದೆ ನಡೆಸಿ, ಗಂಟೆಗೆ 720 ಕಿಲೋಮೀಟರು (450 ಮೈಲಿ) ಸಂತಸರಿ ವೇಗವನ್ನು ತೋರಿಸಿದೆ.

ಮಾಸ್ಕೊ— ಸುಪ್ರಸಿದ್ಧ ಉಜ್ಬೆಕ್ ಲೇಖಕರು ಪರಂತಫ್ ರಷೀದೋವ್ ಮತ್ತು ಎಕ್ಕರ್ ವಿಕ್ಟೋವಿಚ್‌ರವರು 'ಎರಡು ಹೃದಯಗಳ ಗೀತೆ' ಗೆ ದೃಶ್ಯಾವಳಿಯನ್ನು ಬರೆದಿದ್ದು, ಈ ಚಲನಚಿತ್ರವನ್ನು ಮುಂಬೈ ಮತ್ತು ತಾಷ್ಕೆಂತ್ ಚಲಚ್ಚಿತ್ರ ನಿರ್ಮಾಣಾಲಯಗಳಲ್ಲಿ ತಯಾರಿಸಲಾಗುವುದು ; ಭಾರತ ಮತ್ತು ಮಧ್ಯ ಏಷ್ಯಾದೇಶಗಳಲ್ಲಿ ಅತ್ಯಂತ ಜನಪ್ರಿಯವಾಗಿರುವ 'ಕೋವ್ಡಿ-ವರ್ದ' ಎಂಬ ಬೇದಿಲ್ ಕೃತಿ ಆಧಿತೆಯ ಮೇಲೆ ಈ ಚಿತ್ರಕತೆ ಆಧರಿಸಲ್ಪಟ್ಟಿದೆ.

ಪಾಸ್ಕೊ— 27 ವರ್ಷಗಳ ಹಿಂದೆ ನೋ ತಿಂಗಳಲ್ಲಿ ರಾಜ್ಯದ ಕೇಂದ್ರೀಯ ಕೀಲುಬೊಂಬೆ ನಾಟಕಾಲಯವು ಮಾಸ್ಕೋದಲ್ಲಿ ಸಾರ್ವಜನಿಕರಿಗೆ ತನ್ನ ಪ್ರಥಮ ಪ್ರದರ್ಶನವನ್ನು ತೋರಿಸಿತು ; ಅಂದಿನಿಂದ ಕಾಲು ಶತಮಾನ ಸಂದಿದೆ ; ಸೋವಿಯಟ್ ನಾಡಿನ ಜನರು ಕಲಾವಿದ ಸೆರ್ಗೆಯಿ ಒಬ್ರಾಜಟ್ಸೋವ್‌ರವರ ನಿರ್ದೇಶಕತ್ವದಲ್ಲಿ ಈ ನಾಟಕಾಲಯವು ಅತ್ಯುತ್ತಮ ಸೋವಿಯಟ್ ಕಲಾಸಂಸ್ಥೆಗಳಲ್ಲೊಂದಾಗಿ ಬೆಳೆದಿದೆ.

ಕ್ಯಾಲೆಂಡರು ಸ್ವೀಕಾರ

ದೇಶದಲ್ಲಿ ಹೆಚ್ಚು ಯಶಸ್ವಿಯಾಗಿ ನಡೆಯುತ್ತಿರುವ ಬ್ಯಾಂಕುಗಳಲ್ಲಿ ಒಂದಾದ ಕೆನರಾ ಬ್ಯಾಂಕಿನ ಮೈಸೂರು ಶಾಖೆಯವರು ಕಳುಹಿಸಿರುವ ಕ್ಯಾಲೆಂಡರನ್ನು ವಂದನಾಪೂರ್ವಕವಾಗಿ ಸ್ವೀಕರಿಸಿದ್ದೇವೆ

ಪ್ರಸಿದ್ಧ ಪತ್ರಿಕೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

1958-59 ನೇ ಸಂವತ್ಸರದ ಬೇಬಿ ಸಿದ್ಧೇಶ್ವರ ಮಾದೇಶ್ವರ ರಂಗೋತ್ಸವಾಂಗವಾದ ದನಗಳ ಪಂಜೆಯು ಅರಮನೆಗೆ ಸೇರಿದ ಬೇಬಿ ಕಾವಲಿನಲ್ಲಿ ತಾ॥ **9—3—1959** ರಿಂದ ಒಂದು ವಾರ ಕಾಲ ನಡೆಸಲ್ಪಡುತ್ತದೆ. ಸದರಿ ಕಾವಲು ಪಾಂಡವಪುರ, ಕೃಷ್ಣರಾಜಪೇಟೆ ರಸ್ತೆಯಲ್ಲಿರುವ ಚಿನಕುರುಳಿಗೆ ಮೂರು ಮೈಲಿ ದೂರದಲ್ಲಿದೆ. ಜಾತ್ರೆ ಮೂಳಕ್ಕೆ ಹೋಗಲು ಮೂರು ಮೈಲಿ ದೂರ ರಸ್ತೆ ಇದೆ ಗಂಧದ ಕಟ್ಟೆಯಲ್ಲಿರುವ ನೀರನ್ನು ಕುಡಿಯಲು ಮಾತ್ರ ಉಪಯೋಗಿಸಬೇಕಾಗಿದೆ ಮತ್ತು ಹೆಚ್ಚು ಸೌಕರ್ಯಕ್ಕಾಗಿ ಗಂಧದ ಕಟ್ಟೆಯ ಅಂಗಳದಲ್ಲಿ ಚಪ್ಪರಗಳನ್ನು ತೋಡಿಸಲಾಗುತ್ತೆ. ಜಾತ್ರೆ ಮೂಳದ ಹತ್ತಿರವಿರುವ ಇತರ ಕಟ್ಟೆಗಳನ್ನು ಸ್ನಾನ ಮತ್ತು ದನಗಳಿಗಾಗಿ ಉಪಯೋಗಿಸಬಹುದು.

ವೆಟರಿನರಿ ಆಫೀಸರು ಮತ್ತು ಒಬ್ಬ ಡಾಕ್ಟರು ಜಾತ್ರೆ ಕಾಲದಲ್ಲಿ ಹಾಜರಿದ್ದು ದನಗಳ ಮತ್ತು ಜನರ ಆರೋಗ್ಯವನ್ನು ನೋಡಿಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ಪ್ರದರ್ಶನಕ್ಕೆ ಬಂದ ಉತ್ತಮವಾದ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಜಾತ್ರೆಗೆ ಸಂಬಂಧಪಟ್ಟ ದನಗಳ ಸುಂಕ, ಅಂಗಡಿ ಸುಂಕ, ಗೋಲಕ, ಗೊಬ್ಬರ ಈ ಬಾಬುಗಳನ್ನು ರೂಢಿಸಿಕೊಳ್ಳುವ ಹಕ್ಕು ಪಾಂಡವಪುರದ ಶಾಲೂಹುಣಿ ಚಿನಕುರುಳಿ ಗ್ರಾಮದಲ್ಲಿರುವ " ಪ್ರವಾಸಿ ಮಂದಿರದಲ್ಲಿ " [ಟ್ರಾವಲರ್ಸ್ ಬಂಗ್ಲೆಯಲ್ಲಿ] ಅರಮನೆ ಎಸ್ಟೇಟ್ಸ್ ಮತ್ತು ಗಾರ್ಡನ್ಸ್ ಇಲಾಖಾ ಮೊಹ್ತೇಸರವರಿಂದ ತಾ॥ **28—2—1959** ನೇ ಶನಿವಾರ ಮಧ್ಯಾಹ್ನ 12 ಘಂಟೆಗೆ ಹರಾಜು ಹಾಕಲ್ಪಡುತ್ತೆ.

ಮೈಸೂರು
ತಾ॥ 19—2—1959

ಹೆಚ್. ಎಸ್. ಹಾಳ್ಬೇಗಾರ್,
ಸೆಕ್ರೆಟರಿ (ಅರಮನೆ ಆಫೀಸ್)

ವುಡ್‌ಲಾಂಡ್ ಕೀರ್ತಿಯುತ 4 ನೇ ವಾರ

.... ಸಹಸ್ರಾರು ಮಂದಿ ನೋಡಿ ಆನಂದಿಸುತ್ತಿರುವ ಚಿತ್ರರತ್ನ ....

ದಿಲ್ಲೀ — ಕ — ಥಗ್ (ಹಿಂದಿ)

ತಾರಾಗಣ— ನೂರ್ಜ, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು

ಶ್ರವಣಾನಂದಕರ ಹಾಸ್ಯಮಯ ಚಿತ್ರ — ನೀರಿನ ನೃತ್ಯಗಳು ಗೇವಾಕಲರಿನಲ್ಲಿ

ಅಪೇರಾ— 24—2—59 ರಿಂದ

ಮನೋಜ್ಞ ಕೌಟುಂಬಿಕ ಚಿತ್ರ — — ಪ್ರತಿದಿನ 3 ಆಟಗಳು

ಗೌರಿ ಮಹಾತ್ಮೆ

ತಾರಾಗಣ— ಎಸ್ ಟಿ ರಾಮರಾವ್, ರೇಲಂಗಿ, ಶ್ರೀರಂಜನಿ, ಸೂರ್ಯಕಲಾ

SHAKTI
SUDHA
A Superb Tonic

Edited, Printed & Published by Dharma Prachara Nirata M S Krishna Murthy at the Satyavadi Press Chamarajapuram, Mysore

Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
2 insertions and above	1-25
Contract above 100 inches	1-00
500	0-75

Column length 12½ inches; width 2 inches; 4 columns t
The decision of the management is final in all m

Manager " Satyavadi ", Chamara—

ಗೋಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಬ್ಬಾಗಿ ನಡೆ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ
ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚಕ್ಕಾಗಿ 5 ರ

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಜಾಹಿರಾ
ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು